# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

**ನೋಂದಾಯಿತ ಕಛೇರಿ:**
ಕಾರ್ಪೊರೇಟ್ ಕಛೇರಿ,
"ಮೆಸ್ಕಾಂ ಭವನ,
ಬಿಜೈ, ಕಾವೂರು ಕ್ರಾಸ್ ರಸ್ತೆ,
ಮಂಗಳೂರು-575 004.

ಇ_ಮೇಲ್: seecoml@rediffmail.com
CIN: U40109KA2002SGC030425

ಸಂಖ್ಯೆ : ಅ.ಇಂ.(ವಾಣಿಜ್ಯ)/ಕಾಇಂ(ಹೆಚ್.ವಿ.ಸಿ.ಎಂ.)/2020-21/ 1269-96 ದಿನಾಂಕ: 30 APR 2020
ಲಗತ್ತು : ಇಂಧನ ಇಲಾಖೆಯ ಸುತ್ತೋಲೆ ದಿನಾಂಕ:30.04.2020

ಅಧೀಕ್ಷಕ ಇಂಜಿನಿಯರ್ (ವಿ.),
ಕಾರ್ಯ & ಪಾಲನಾ ವೃತ್ತ,
ಮಂಗಳೂರು / ಉಡುಪಿ / ಶಿವಮೊಗ್ಗ / ಚಿಕ್ಕಮಗಳೂರು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ.),
ಕಾರ್ಯ & ಪಾಲನಾ ವಿಭಾಗ,
ಮಂಗಳೂರು / ಅತ್ತಾವರ / ಬಂಟ್ವಾಳ / ಪುತ್ತೂರು / ಉಡುಪಿ / ಕುಂದಾಪುರ /
ಶಿವಮೊಗ್ಗ / ಭದ್ರಾವತಿ / ಸಾಗರ / ಶಿಕಾರಿಪುರ / ಚಿಕ್ಕಮಗಳೂರು / ಕಡೂರು / ಕೊಪ್ಪ.

ಮಾನ್ಯರೆ,

ವಿಷಯ: **ಮೇ-2020 ರ ತಿಂಗಳಲ್ಲಿ ಮಾಪಕ ಓದುವಿಕೆ, ಬಿಲ್ಲಿಂಗ್ ಮತ್ತು ರೆವೆನ್ಯೂ ವಸೂಲಾತಿಗಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ.**

ಉಲ್ಲೇಖ: ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ENERGY 111 PSR 2020/ ದಿನಾಂಕ:30-04-2020

ಮೇ-2020 ರ ತಿಂಗಳಲ್ಲಿ ಮಾಪಕ ಓದುವಿಕೆ, ಬಿಲ್ಲಿಂಗ್ ಮತ್ತು ರೆವೆನ್ಯೂ ವಸೂಲಾತಿಗಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಕರ್ನಾಟಕ ಸರ್ಕಾರದ, ಇಂಧನ ಇಲಾಖೆಯು ವಿಸ್ತೃತ ಮಾರ್ಗದರ್ಶನಗಳನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ನೀಡಲಾಗಿರುತ್ತದೆ.

ಸದರಿ ಸುತ್ತೋಲೆಯ ಪ್ರತಿಯನ್ನು ಲಗತ್ತಿಸುತ್ತಾ, ಆ ಪ್ರಕಾರ ಅಗತ್ಯ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

30/4

ಅಧೀಕ್ಷಕ ಇಂಜಿನಿಯರ್ (ವಿ.) (ವಾಣಿಜ್ಯ),
ಮ.ವಿ.ಸ.ಕಂ., ಕಾರ್ಪೊರೇಟ್ ಕಛೇರಿ,
ಮಂಗಳೂರು.

ಕರ್ನಾಟಕ ಸರ್ಕಾರ

**ಸಂಖ್ಯೆ: ಎನರ್ಜಿ 111 ಪಿಎಸ್‌ಆರ್ 2020**
**ಲಗತ್ತು:**

**ಕರ್ನಾಟಕ ಸರ್ಕಾರದ ಸಚಿವಾಲಯ**
**ವಿಕಾಸ ಸೌಧ, ಬೆಂಗಳೂರು.**
**ದಿನಾಂಕ: 30.04.2020**

**ಸುತ್ತೋಲೆ**

ವಿಷಯ ಮೇ 2020 ಮತ್ತು ನಂತರದ ಮಾಹೆಗಳಲ್ಲಿ ಮಾಪಕ ಓದುವಿಕೆ, ಬಿಲ್ಲು ತಯಾರಿಕೆ ಮತ್ತು ಕಂದಾಯ ವಸೂಲಾತಿ ಬಗ್ಗೆ.

ಉಲ್ಲೇಖ

**1. ಸುತ್ತೋಲೆ ಸಂಖ್ಯೆ: ಎನರ್ಜಿ 111 ಪಿಎಸ್‌ಆರ್ 2020 ದಿನಾಂಕ 03.04.2020.**

**2. ಸುತ್ತೋಲೆ ಸಂಖ್ಯೆ: ಎನರ್ಜಿ 111 ಪಿಎಸ್‌ಆರ್ 2020 ದಿನಾಂಕ 09.04.2020.**

***

1. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಸುತ್ತೋಲೆ ದಿನಾಂಕ 03.04.2020 ಮತ್ತು 09.04.2020ರಲ್ಲಿ ಎಲ್ಲಾ ಹೆಚ್‌ಟಿ ಮತ್ತು ಎಲ್‌ಟಿ 40ಹೆಚ್‌ಪಿ ಮತ್ತು ಹೆಚ್ಚಿನ ಪ್ರಮಾಣವಿರುವ ಸ್ಥಾವರಗಳಿಗೆ ಭೌತಿಕವಾಗಿ ಮಾಪಕಗಳನ್ನು ಓದುವಿಕೆ (Meter Reading) ಮಾಡಲು ಹಾಗೂ ಇತರೆ ಜಕಾತಿ ಪ್ರವರ್ಗದ ಸ್ಥಾವರಗಳಿಗೆ ಸರಾಸರಿ ಆಧಾರದ ಮೇಲೆ ಬಿಲ್ಲು ತಯಾರಿಸಿ ಸಾಧ್ಯವಾದಷ್ಟು Online/Whatsapp/SMS/helpline ಮುಖಾಂತರ ಬಿಲ್ಲುಗಳನ್ನು ಗ್ರಾಹಕರಿಗೆ ವಿತರಿಸಲು ಹಾಗೂ Online ಮುಖಾಂತರ ಗ್ರಾಹಕರು ಬಿಲ್ಲಿನ ಮೊತ್ತವನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ವಿಸಕಂಗಳಿಗೆ ನಿರ್ದೇಶನ ನೀಡಲಾಗಿದೆ. ಗ್ರಾಹಕರಿಗೆ ವಿದ್ಯುತ್ ಬಿಲ್ ಮಾಹಿತಿ ತಲುಪದಿದ್ದಲ್ಲಿ, ಬಿಲ್ ಪ್ರತಿಗಳನ್ನು ಪಡೆಯಲು ಸಹಾಯವಾಣಿ 1912ಕ್ಕೆ (24 x 7 ಸಹಾಯವಾಣಿ) ಕರೆಮಾಡಿ ತಮ್ಮ ಬಿಲ್ಲಿನ ಖಾತೆಯ ಸಂಖ್ಯೆ ಮತ್ತು mobile ಸಂಖ್ಯೆ ನೀಡಿ ಬಿಲ್ಲುಗಳನ್ನು e-mail/Whatsapp/SMS ಮುಖಾಂತರ ಪಡೆಯುವಂತೆ ಪ್ರಚಾರ ಪಡಿಸಲು (wide publicity) ಸೂಚಿಸಿದೆ. ಗ್ರಾಹಕರಿಗೆ ಸರಾಸರಿ ಬಳಕೆಯ ಆಧಾರದ ಮೇಲೆ ತಯಾರಿಸಿರುವ ಬಿಲ್ಲಿನ ಮೊತ್ತವು ವಾಸ್ತವಿಕ ಬಳಕೆಯ ಪ್ರಮಾಣಕ್ಕಿಂತ ಹೆಚ್ಚಾಗಿರುವುದಾಗಿ ಅನಿಸಿದಲ್ಲಿ, ಗ್ರಾಹಕರೆ ತಮ್ಮ ಸ್ಥಾವರದ self reading (trust & verify) ಅನ್ನುWhatsapp/SMS ಮುಖಾಂತರ ತಮ್ಮ ವ್ಯಾಪ್ತಿಯಲ್ಲಿರುವ ಉಪ ವಿಭಾಗಕ್ಕೆ ಒದಗಿಸಬಹುದು ಅಥವಾ ಸಹಾಯವಾಣಿ 1912ಕ್ಕೆ (ಸಂಬಂಧಿಸಿದ ವಿಸಕಂಗಳ web site ನಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರ ಲಭ್ಯವಿರುತ್ತದೆ) ಕರೆ ಮಾಡಿ ಗ್ರಾಹಕರು ತಮ್ಮ mobile ಸಂಖ್ಯೆಯನ್ನು ಒದಗಿಸಿ ತಮ್ಮ e-mail ಅಥವಾ Whatsapp ನಲ್ಲಿ ವಾಸ್ತವ meter reading ಬಿಲ್ಲುಗಳನ್ನು ಪಡೆಯಬಹುದು.
2. ಮುಂದುವರೆದು COVID-19 ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಹಕರ ಸುರಕ್ಷತೆಯನ್ನು ಪರಿಗಣಿಸಿ ಮೇಲ್ಕಂಡ ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಈ ವ್ಯವಸ್ಥೆಯು ಏಪ್ರಿಲ್ 2020ರ ಮಾಹೆಗೆ ಮಾತ್ರ (as a one time measure) ಅನ್ವಯಿಸಲಾಗುತ್ತದೆಂದು ಸ್ಪಷ್ಟವಾಗಿ ತಿಳಿಸಿದೆ ಮತ್ತು ದಿನಾಂಕ 01.05.2020ರ ನಂತರ ಈ

ಹಿಂದೆ ನಿರ್ವಹಿಸುತ್ತಿದ್ದ ರೀತಿಯಲ್ಲಿಯೇ ಭೌತಿಕವಾಗಿ ಮಾಪಕ ಓದುವಿಕೆ, ಬಿಲ್ಲಿಂಗ್ ಮತ್ತು ಕಂದಾಯ ವಸೂಲಾತಿ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಸರಾಸರಿ ಬಿಲ್ಲು ಮತ್ತು ವಾಸ್ತವ ಮಾಪಕ ಓದುವಿಕೆಯ ಬಿಲ್ಲುಗಳಿಗೆ ವ್ಯತ್ಯಾಸವಿದ್ದಲ್ಲಿ ಸದರಿ ವ್ಯತ್ಯಾಸವನ್ನು ಮುಂದಿನ ಮಾಹೆಯ ಬಿಲ್ಲಿನಲ್ಲಿ ಸರಿಪಡಿಸಲು ತಿಳಿಸಲಾಗಿದೆ.

3. ಮೇಲೆ ತಿಳಿಸಿದಂತೆ, ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಹೆಚ್‌ಟಿ ಮತ್ತು ಎಲ್‌ಟಿ 40ಹೆಚ್‌ಪಿ & ಹೆಚ್ಚಿನ ಪ್ರಮಾಣ ಸ್ಥಾವರಗಳ ವಿದ್ಯುತ್ ಬಳಕೆಯನ್ನು ಮಾಪಕ ಓದುವ ಮೂಲಕ ಮತ್ತು ಇತರೆ ಪ್ರವರ್ಗದ ಗ್ರಾಹಕರಿಗೆ ಸರಾಸರಿ ಆಧಾರದ ಮೇಲೆ ವಿದ್ಯುತ್ ಬಿಲ್ಲುಗಳನ್ನು ವಿತರಿಸಲಾಗಿರುತ್ತದೆ ಹಾಗೂ ಬಿಲ್ಲುಗಳ ವಿವರಗಳನ್ನು ನೊಂದಣಿಯಾದ e-mail ಗಳಿಗೆ / mobile ಸಂಖ್ಯೆಗಳಿಗೆ ಕಳುಹಿಸಲಾಗಿದೆ.

4. ದಿನಾಂಕ 14.04.2020 ರಿಂದ 03.05.2020ರವರೆಗೆ lock down ಮುಂದುವರೆದಿರುವುದರಿಂದ ಈ ಕೆಳಕಂಡ ಕಾರಣಗಳಿಂದಾಗಿ ಮೇ 2020ರ ಮಾಹೆಯಲ್ಲಿ ವಿದ್ಯುತ್ ಸ್ಥಾವರಗಳ ಮಾಪಕ ಓದುವಿಕೆಯನ್ನು ಮಾಡಿ ವಾಸ್ತವಿಕವಾಗಿ ಮಾಪಕದಲ್ಲಿ ದಾಖಲಾದ ಬಳಕೆಯ ಪ್ರಮಾಣಕ್ಕೆ ವಿದ್ಯುತ್ ಬಿಲ್ ನೀಡಲು ಸರ್ಕಾರದಿಂದ ನಿರ್ದೇಶನ ನೀಡುವಂತೆ ವಿದ್ಯುತ್ ಸರಬರಾಜು ಕಂಪನಿಗಳು ಕೋರಿರುತ್ತಾರೆ.

   a) ಏಪ್ರಿಲ್ 2020ರ ಮಾಹೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಘಟಕಗಳು ಸಂಪೂರ್ಣವಾಗಿ ಸ್ಥಗಿತವಾಗಿರುವುದರಿಂದ, ಕಡಿಮೆಯಾಗಿರುವ ಕಂದಾಯ ಬೇಡಿಕೆಯನ್ನು ಮೇ 2020ರ ಮಾಹೆಯಲ್ಲಿನ ಬಿಲ್ಲಿಂಗ್ ನಲ್ಲಿ ಹೆಚ್ಚಿನ ಕಂದಾಯ ಬೇಡಿಕೆಯನ್ನು ನಿರೀಕ್ಷಿಸಬಹುದು.

   b) ಏಪ್ರಿಲ್ 2020ರ ಮಾಹೆಯಲ್ಲಿ ವಾಣಿಜ್ಯ ಮತ್ತು ಸಣ್ಣ ಕೈಗಾರಿಕ ಘಟಕಗಳು (ಎಲ್‌ಟಿ 40ಹೆಚ್‌ಪಿ & ಕಡಿಮೆ ಪ್ರಮಾಣವಿರುವ ಸ್ಥಾವರಗಳು) ಬಹುತೇಕ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಇಂತಹ ಸ್ಥಾವರಗಳಿಗೆ ನಿಗಧಿತ ಶುಲ್ಕವನ್ನು ವಿಧಿಸಿ ಬಿಲ್ಲನ್ನು ವಿತರಿಸಬೇಕಾಗುತ್ತದೆ. ಆದರೆ ಸರಾಸರಿ ಆಧಾರದ ಮೇಲೆ ಮೇ 2020ರ ಮಾಹೆಯಲ್ಲಿ ಬಿಲ್ಲನ್ನು ತಯಾರಿಸಿ ವಿತರಿಸುವುದು ಸಮಂಜಸವಾಗುವುದಿಲ್ಲ.

   c) ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ಗೃಹ ಬಳಕೆಯ ಪ್ರವರ್ಗದಲ್ಲಿ ಬಹಳಷ್ಟು ಗ್ರಾಹಕರು Fan ಮತ್ತು Air-Conditioner ಗಳನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಹಾಗೂ lockdown ನಿಂದಾಗಿ ಬಹಳಷ್ಟು IT & BT ಸಿಬ್ಬಂದಿಗಳು ಮನೆಯಿಂದಲೇ ಕಛೇರಿ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದ, ಏಪ್ರಿಲ್ ಮತ್ತು ಮೇ 2020ರ ಮಾಹೆಗಳಲ್ಲಿ Maximum Demand (MD) ಹಾಗೂ ವಿದ್ಯುತ್ ಬಳಕೆಯಲ್ಲಿನ ಪ್ರಮಾಣವು ಸ್ವಲ್ಪ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಏಪ್ರಿಲ್ 2020ರ ಮಾಹೆಯಲ್ಲಿ ವಿತರಿಸಲಾಗಿರುವ ಸರಾಸರಿ ಬಿಲ್ಲಿನ ಮೊತ್ತವು ವಾಸ್ತವಿಕ ಬಳಕೆ ಪ್ರಮಾಣದ ವಿದ್ಯುತ್ ಬಿಲ್ಲಿನ ಮೊತ್ತಕ್ಕಿಂತ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಮೇ 2020ರ ಮಾಹೆಯಲ್ಲಿ ವಾಸ್ತವಿಕವಾಗಿ ಮಾಪಕ ಓದುವಿಕೆಯನ್ನು ಮಾಡಿದಲ್ಲಿ, ಗೃಹ ಬಳಕೆ ಸ್ಥಾವರಗಳಿಂದ ಹೆಚ್ಚಿನ ಕಂದಾಯ ಬೇಡಿಕೆಯಾಗುವುದನ್ನು ಹಾಗೂ ಏಪ್ರಿಲ್ 2020ರ ಮಾಹೆಯ ಬಿಲ್ಲಿನ ಅಪಾವತಿ ಮೊತ್ತವು ಸ್ವಲ್ಪ ಮಟ್ಟಿಗೆ ವಸೂಲಾತಿಯಾಗಬಹುದೆಂದು ನಿರೀಕ್ಷಿಸಿದೆ. ಇದರಿಂದಾಗಿ, ವಿದ್ಯುತ್ ಸರಬರಾಜು ಕಂಪನಿಗಳು ಸ್ವಲ್ಪ ಮಟ್ಟಿಗೆ ಆರ್ಥಿಕ ಸಂಕಷ್ಟದಿಂದ ಹೊರಬರಲು ಸಹಾಯವಾಗುತ್ತದೆ.

   d) ಬಹಳಷ್ಟು ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಗಳನ್ನು ಮತ್ತು e-mail ID ಗಳನ್ನು ನೊಂದಣಿ ಮಾಡದಿರುವುದರಿಂದ ಹಾಗೂ ಗ್ರಾಹಕರುಗಳಿಗೆ Internet ಸೇವೆಯನ್ನು Access ಮಾಡಲು ಸಾಧ್ಯವಾಗದೆ

ಇರುವುದರಿಂದ ಅಥವಾ online ವ್ಯವಸ್ಥೆಗಳಿಗೆ ಸ್ಪಂದಿಸದೆ ಇರುವುದರಿಂದ, ಏಪ್ರಿಲ್ 2020ರ ಮಾಹೆಯಲ್ಲಿ ಗ್ರಾಹಕರುಗಳಿಗೆ ಸಂಪೂರ್ಣವಾಗಿ ಬಿಲ್ಲುಗಳನ್ನು ವಿತರಿಸಲು ಸಾಧ್ಯವಾಗಿರುವುದಿಲ್ಲ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇ 2020 ಮತ್ತು ನಂತರದ ಮಾಹೆಗಳಲ್ಲಿ ಮಾಪಕ ಓದುವಿಕೆ, ಬಿಲ್ಲಿಂಗ್ ಮತ್ತು ವಸೂಲಾತಿ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಈ ಕೆಳಕಂಡಂತೆ ನಿರ್ದೇಶನ ನೀಡಿದೆ.

**A ಮಾಸಿಕ ಬಿಲ್ಲುಗಳನ್ನು ತಯಾರಿಸುವುದು ಮತ್ತು ಗ್ರಾಹಕರಿಗೆ ವಿತರಿಸುವುದು.**

1. ಮೇ 2020 ಮತ್ತು ನಂತರದ ಮಾಹೆಗಳಲ್ಲಿ ವಿಸಕಂಗಳು ಎಲ್ಲಾ ರೀತಿಯ ಪ್ರವರ್ಗದ ಗ್ರಾಹಕರ ಸ್ಥಾವರಗಳಿಗೆ ಭೌತಿಕವಾಗಿ ಮಾಪಕ ಓದುವುದು ಮತ್ತು ಮಾಪಕದಲ್ಲಿ ದಾಖಲಾಗಿರುವ ವಾಸ್ತಾವಿಕ ವಿದ್ಯುತ್ ಬಳಕೆಯ ಪ್ರಮಾಣಕ್ಕೆ ವಿದ್ಯುತ್ ಬಿಲ್ ಮಾಡಿ ವಿತರಿಸುವುದು.
2. ಏಪ್ರಿಲ್ 2020ರ ಮಾಹೆಯಲ್ಲಿ ಸರಾಸರಿ ಆಧಾರದ ಮೇಲೆ ವಿತರಿಸಿರುವ ಬಿಲ್ಲುಗಳನ್ನು ಮಾಪಕದಲ್ಲಿ ದಾಖಲಾಗಿರುವ ವಾಸ್ತವಿಕ ವಿದ್ಯುತ್ ಬಳಕೆಯ ಪ್ರಮಾಣಕ್ಕೆ ತಯಾರಿಸಿರುವ ಬಿಲ್ಲಿನೊಂದಿಗೆ ತಾಳೆ ಮಾಡಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಗಳನ್ನು ಪಾಲಿಸಿ, ವ್ಯತ್ಯಾಸದ ಮೊತ್ತವನ್ನು ಹೊಸ ಬಿಲ್ಲಿನಲ್ಲಿ ಹೊಂದಾಣಿಕೆ ಮೂಲಕ ಸರಿಪಡಿಸುವುದು.
3. ಬಿಲ್ಲುಗಳನ್ನು ಸಾಧ್ಯವಾದಷ್ಟು e-mail/Whatsapp/SMS ಮೂಲಕ ವಿತರಿಸುವುದು.
4. ಸಂಪೂರ್ಣವಾಗಿ Sealdown ಆಗಿರುವ ಪ್ರದೇಶಗಳಲ್ಲಿ / quarantine ಆಗಿರುವ ಮನೆಗಳಲ್ಲಿ (ಮನೆಗಳ ಆವರಣದಲ್ಲಿ quarantine ನೋಟಿಸ್ ಅಂಟಿಸಿರುವುದನ್ನು ಗಮನಿಸುವುದು) ವಾಸಿಸುತ್ತಿರುವ ಎಲ್ಲಾ ಪ್ರವರ್ಗದ ಗ್ರಾಹಕರ ವಿದ್ಯುತ್ ಸ್ಥಾವರಗಳಿಗೆ ಸರಾಸರಿ ಬಿಲ್ಲು ಅಥವಾ ನಿಗಧಿತ ಶುಲ್ಕ ವಿಧಿಸುವ ಬಿಲ್ಲು ಇದರಲ್ಲಿ ಅನ್ವಯವಾಗುವ ಆಧಾರದ ಬಿಲ್ಲನ್ನು ವಿತರಿಸುವುದು.

**B ಈ ಕೆಳಕಂಡ ವಿಧಾನಗಳನ್ನು (Modes) ಉಪಯೋಗಿಸಿಕೊಂಡು ಗ್ರಾಹಕರು ವಿದ್ಯುತ್ ಬಿಲ್ಲುಗಳನ್ನು ಪಾವತಿಸುವುದು.**

1. ಭೌತಿಕ ವಿದ್ಯುತ್ ಬಿಲ್ಲು ಸ್ವೀಕೃತವಾಗದಿದ್ದಲ್ಲಿ, ಗ್ರಾಹಕರು ಸಹಾಯವಾಣಿ 1912ಕ್ಕೆ (24 x 7 ಸಹಾಯವಾಣಿ) ಕರೆಮಾಡಿ ತಮ್ಮ ಖಾತೆಯ ID ಮತ್ತು Mobile ಸಂಖ್ಯೆಯನ್ನು ತಿಳಿಸಿ, e-mail/Whatsapp/SMS etc, ಮೂಲಕ ಬಿಲ್ಲಿನ ಪ್ರತಿಗಳನ್ನು ಪಡೆಯುವುದು.
2. ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ Mobile APP ನಲ್ಲಿ ನೊಂದಾಯಿಸಿ ಬಿಲ್ಲಿನ ವಿವರಗಳನ್ನು ಪಡೆಯುವುದು.
3. ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ ಅಂತರ್ಜಾಲದಲ್ಲಿ Online ಮುಖಾಂತರ ನೊಂದಾಯಿಸಿ ಬಿಲ್ಲಿನ ವಿವರಗಳನ್ನು ಪಡೆಯುವುದು.
4. Online / Digital ಪಾವತಿ ವ್ಯವಸ್ಥೆಯಡಿ ವಿದ್ಯುತ್ ಬಿಲ್ ಪಾವತಿಸುವುದು.
    - ವಿದ್ಯುತ್ ಸರಬರಾಜು ಕಂಪನಿಗಳ ಅಂತರ್ಜಾಲದಲ್ಲಿ Online ಮುಖಾಂತರ ಪಾವತಿ.
    - Karnataka–One ಅಂತರ್ಜಾಲ / APP.
    - BBPS ಮುಖಾಂತರ ಪಾವತಿ – ಎಲ್ಲಾ ಬ್ಯಾಂಕ್‌ಗಳ Debit Card, Credit Card ಮತ್ತು Internet Banking, Wallet payment, UPI payment, Pay U APP.
    - IMI mobile APP

5. ಸಾಮಾಜಿಕ ಅಂತರ ಕಾಯ್ದುಕೊಂಡು ಮತ್ತು ಮಾಸ್ಕ್‌ಗಳನ್ನು ಧರಿಸಿ ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ವಿದ್ಯುತ್ ಸರಬರಾಜು ಕಂಪನಿಗಳ ಸ್ಥಳೀಯ ಉಪ ವಿಭಾಗದ ನಗದು ಕೌಂಟರ್‌ಗಳಲ್ಲಿ / ATP ಕೌಂಟರ್‌ಗಳಲ್ಲಿ ಪಾವತಿಸುವುದು.

6. ಗ್ರಾಮೀಣ ಪ್ರದೇಶಗಳಲ್ಲಿ ಮಾಪಕ ಓದುಗ / ಗ್ರಾಮ ವಿದ್ಯುತ್ ಪ್ರತಿನಿಧಿಗಳು ಉಪಯೋಗಿಸುವ spot billing machine ನಲ್ಲಿನ ಸೌಲಭ್ಯವನ್ನು (spot collection) ಬಳಸಿಕೊಂಡು ಪಾವತಿಸುವುದು.

ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳಾದ ಅಂದರೆ ಮಾಸ್ಕ್ ಧರಿಸುವುದು, Sanitiser ಉಪಯೋಗಿಸುವುದು, ಕೈಕವಚ ಧರಿಸುವುದು ಮತ್ತು Standard Operating Procedure ನಿರ್ವಹಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಶಿಷ್ಟಾಚಾರ ಹಾಗೂ ಇತರೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಮೇಲ್ಕಂಡ ಸೂಚನೆಗಳನ್ನು ಪಾಲಿಸುವುದು.

N. mangalagowri 30/4/2020

(ಎನ್ ಮಂಗಳ ಗೌರಿ)

**ಸರ್ಕಾರದ ಅಧೀನ ಕಾರ್ಯದರ್ಶಿ,**

**ಇಂಧನ ಇಲಾಖೆ**

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ, ಮವಿಕಂ, ಹುವಿಕಂ, ಗುವಿಕಂ ಮತ್ತು ಚಾವಿಸನಿನಿ.

ಪ್ರತಿಗಳು:

2. ಭಾರತ ಸರ್ಕಾರದ ಇಂಧನ ಮಂತ್ರಾಲಯರವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿರವರು, ಶ್ರಮ ಶಕ್ತಿ ಭವನ, ರಫಿ ಮಾರ್ಗ್, ನವದೆಹಲಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–52.
8. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ/ಕವಿನಿನಿ/ಪಿಸಿಕೆಎಲ್/ಕ್ರೆಡೆಎಲ್.
9. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
10. ಮುಖ್ಯ ಕಡತಕ್ಕೆ.